# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,

# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:5019/2022** ಪ್ರಾ.ಸಾ-1

ಚಾಸಾ-1

ದಿನಾಂಕ:11-08-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಹೆಸರು | ಸುವರ್ಣ ಲಕ್ಷ್ಮೀ |
| ಗಂಡನ ಹೆಸರು | ರೇಣುಕಾಚಾರಿ |
| ವಯಸ್ಸು | 23 |
| ಉದ್ಯೋಗ | ಗೃಹಿಣಿ |
| ವಾಸಸ್ಥಳ | ಆನೇಕಲ್ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ :-**

ಮೃತೆ ಸುಮಿತ್ರ ನನ್ನ ತಾಯಿ. ನನ್ನ ತಂದೆಯ ಹೆಸರು ಕೃಷ್ಣಾಚಾರಿ. ನನ್ನ ತಂದೆ ತಾಯಿಗೆ ಇಬ್ಬರು ಹೆಣ್ಣು ಮಕ್ಕಳು. ನಾನು ದೊಡ್ಡವಳು. ಇನ್ನೊಬ್ಬಳು ನನ್ನ ತಂಗಿ 2 ನೇ ಆರೋಪಿ ಶೈಲಜ. ನನ್ನ ತಂದೆ 2008 ನೇ ಇಸವಿಯಲ್ಲಿ ತೀರಿಕೊಂಡಿದ್ದಾರೆ.

ವಿ.ಸಿ ಮೂಲಕ ನಾನು ನೋಡುತ್ತಿರುವ ಆರೋಪಿಗಳು ಗೊತ್ತು. ಅವರು ನನ್ನ ತಂಗಿ ಶೈಲಜಾ ಮತ್ತು ನನ್ನ ತಾಯಿಯ ತಂಗಿ ಛಾಯ ಅವರ ಮಗ ಪುನೀತ್. ನನ್ನ ಚಿಕ್ಕಮ್ಮ ಛಾಯಾ ಅವರ ನೆಲಮಂಗಲ ತಾಲೂಕಿನ ಮಂಡೆ ಗ್ರಾಮದಲ್ಲಿ ವಾಸ ಇದ್ದಾರೆ. ನನ್ನ ತಾಯಿಯ ಊರು ಸಜ್ಜಣ್ಣರ ಬೀದಿ ಕೊರಟಗೆರೆ. ನನ್ನ ತಂದೆ ತೀರಿಕೊಂಡ ಬಳಿಕ ನಮ್ಮ ಮನೆಯಲ್ಲಿ ನನ್ನ ತಾಯಿ, ನಾನು ಮತ್ತು ನನ್ನ ತಂಗಿ ಶೈಲಜಾ ಮೂರು ಜನ

ಮಾತ್ರ ವಾಸ ಇದ್ದೆವು. ನನ್ನ ಮದುವೆ ದಿನಾಂಕಃ23-08-2020 ರಂದು ಆನೇಕಲ್ ನ ರೇಣುಕಾಚಾರಿ ಅವರ ಜೊತೆ ಆಗಿದೆ. ಮದುವೆಯ ಬಳಿಕ ನಾನು ನನ್ನ ಗಂಡನ ಊರು ಆನೇಕಲ್ ನಲ್ಲಿ ವಾಸ ಇದ್ದೇವೆ. ನನ್ನ ಮದುವೆಯ ಬಳಿಕ ನನ್ನ ತವರು ಮನೆಯಲ್ಲಿ ನನ್ನ ತಾಯಿ ಮತ್ತು ತಂಗಿ ಶೈಲಜಾ ವಾಸ ಇದ್ದರು. ನಾನು ಮದುವೆಯಾಗಿ ಗಂಡನ ಮನೆಗೆ ಹೋಗುವ ಸಮಯದಲ್ಲಿ ನನ್ನ ತಂಗಿ ಬಿ.ಕಾಂ ಮುಗಿಸಿದ್ದಳು.

ನಾನು ಗಂಡನ ಮನೆಯಲ್ಲಿ ಇರುವಾಗ ನನ್ನ ತಾಯಿ ಫೋನ್ ಮಾಡಿ 1 ನೇ ಆರೋಪಿ ಪುನೀತ್ ನಮ್ಮ ಮನೆಗೆ ಬಂದು ಸಣ್ಣ ಸಣ್ಣ ವಿಚಾರಕ್ಕೂ ನನ್ನ ಬಳಿ ಗಲಾಟೆ ಮಾಡುತ್ತಾನೆ ಎಂದು ಹೇಳಿದರು. ನಾನು ಮನೆಗೆ ಬಂದು ಮಾತನಾಡುತ್ತೇನೆ ಎಂದು ಹೇಳಿದ್ದೆ. ದಿನಾಂಕಃ18-12-2021 ರಂದು ಆನೇಕಲ್ ನಲ್ಲಿ ನನ್ನ ಹುಟ್ಟಿದ ಹಬ್ಬದ ದಿನಾಚರಣೆ ಇತ್ತು. ನಾನು ನನ್ನ ತಾಯಿ, ನನ್ನ ತಂಗಿ ಮತ್ತು ಪುನೀತ್ ನನ್ನು ನಮ್ಮ ಮನೆಗೆ ಆಹ್ವಾನಿಸಿದ್ದೆ. ಮೂರು ಜನ ಕೂಡ ನನ್ನ ಹುಟ್ಟು ಹಬ್ಬಕ್ಕೆ ಆನೇಕಲ್ ಗೆ ಬಂದಿದ್ದರು. ಪುನೀತ್ ಕೆಲಸ ಇದೆ ಎಂದು ಮರು ದಿನ ಬೆಳಿಗ್ಗೆ ಹೊರಟು ಹೋದ. ತಂಗಿ ಮತ್ತು ತಾಯಿ ನಮ್ಮ ಮನೆಯಲ್ಲೆ ಇದ್ದರು. ನನ್ನ ತಾಯಿ ಶೈಲಜಾ ಮತ್ತು ಪುನೀತ್ ಪರಸ್ಪರ ಪ್ರೀತಿಸುತ್ತಿದ್ದಾರೆ ಮದುವೆ ಮಾಡಿಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ, ಎಂದು ಹೇಳಿದರು. ನಾನು ಆಗ ಈ ವಿಚಾರ ಬೇಡ ಮನೆಗೆ ಬಂದು ಮಾತನಾಡುತ್ತೇನೆ ಎಂದು ಹೇಳಿದಳು. ದಿನಾಂಕಃ22-12-2021 ರಂದು ತಾಯಿ ಮತ್ತು ತಂಗಿ ಶೈಲಜಾ ತವರು ಮನೆಗೆ ಹೋದರು.

ದಿನಾಂಕಃ31-01-2022 ರಂದು ಪುನೀತ್ ನನ್ನ ಯಜಮಾನರಿಗೆ ಫೋನ್ ಮಾಡಿ ನನ್ನ ತಾಯಿ ಸಂಪಿನಲ್ಲಿ ಬಿದ್ದು ತೀರಿಹೋಗಿದ್ದಾರೆ ಎಂದು ಹೇಳಿದ. ನನ್ನ ಮನೆಯವರ ಫೋನ್ ನಂಬರ್.9632726860. ಆಗ ನನ್ನ ಮನೆಯವರು ಎತ್ತಿ ನೋಡಿ ಬದುಕಿರಬಹುದು ಎಂದು ಹೇಳಿದರು. ಆಗ ಅವನು ಇಲ್ಲ ಸತ್ತು ಹೋಗಿದ್ದಾರೆ ಎಂದು ಹೇಳಿದ. ತಕ್ಷಣ ನಾನು, ನನ್ನ ಗಂಡ, ಅತ್ತೆ-ಮಾವ ನನ್ನ ತವರು ಮನೆಗೆ ಹೊರೆಟೆವು. ನಾವು ತವರು ಮನೆಗೆ ತಲುಪುವಷ್ಟರಲ್ಲಿ ನನ್ನ ತಾಯಿಯ ಹೆಣವನ್ನು ಮನೆಯ ಹಾಲ್

ನಲ್ಲಿ ಮಲಗಿಸಿ ಪೂಜೆ ಮಾಡುತ್ತಿದ್ದರು. ನನ್ನ ತಾಯಿಯ ಮುಖದಲ್ಲಿ ಕಪ್ಪು ಕಲೆ ಇತ್ತು. ನನಗೆ ಆಗ ಅನುಮಾನ ಬಂದರೂ ಸಂಪಿನೊಳಗೆ ಬಿದ್ದಾಗ ಆ ರೀತಿ ಆಗಿರಬಹುದು ಎಂದು ಸುಮ್ಮನಾದೆ. ಬಳಿಕ ನನ್ನ ತಾಯಿಯ ಶವವನ್ನು ಕೊರಟಗೆರೆಯ ಮಲ್ಲೇಶ್ವರ ರಸ್ತೆ ರುದ್ರ ಭೂಮಿಯಲ್ಲಿ ಮಣ್ಣು ಮಾಡಿದೆವು. ಬಳಿಕ ಸುಮಾರು 10 ದಿನ ನಾವೆಲ್ಲಾ ಒಟ್ಟಿಗೆ ಮನೆಯಲ್ಲೇ ಇದ್ದೆವು. ಆ 10 ದಿನಗಳಲ್ಲಿ ಆರೋಪಿಗಳಿಬ್ಬರು ಗುಟ್ಟಾಗಿ ಇಬ್ಬಿಬ್ಬರೆ ಮಾತನಾಡುತ್ತಿದ್ದರು.

ದಿನಾಂಕ:10-02-2022 ರಂದು ನನ್ನ ತಾಯಿಯ 11 ನೇಯ ದಿವಸದ ಆರಾಧನ ಕಾರ್ಯಕ್ರಮ ಮಾಡಿದೆವು. ಶೈಲಜಾಳನ್ನು ಒಬ್ಬಳನ್ನೆ ಮನೆಯಲ್ಲಿ ಬಿಡುವುದು ಬೇಡ ನಾನು ಕರೆದುಕೊಂಡು ಹೋಗುತ್ತೇನೆ ಎಂದು ಅಥವಾ ತುಮಕೂರಿನ ದೊಡ್ಡಪ್ಪನ ಮನೆಯಲ್ಲಿ ಇರಲಿ ಎಂದು ಮಾತನಾಡಿಕೊಂಡೆವು. ಆಗ 1 ನೇ ಆರೋಪಿ ನಾನು ಎಲ್ಲಿಗೂ ಕಳುಹಿಸುವುದಿಲ್ಲ, ನಾವಿಬ್ಬರೂ ಪರಸ್ಪರ ಪ್ರೀತಿಸುತ್ತೇವೆ ಮತ್ತು ಮದುವೆ ಆಗುತ್ತೇವೆ ಎಂದು ಹೇಳಿದರು. ಆಗ ನಾನು ಮತ್ತು ನನ್ನ ಮನೆಯವರು ನೀವಿಬ್ಬರು ಅಣ್ಣ ತಂಗಿ ಆದ್ದರಿಂದ ಮದುವೆ ಆಗಲು ಆಗುವುದಿಲ್ಲ ಎಂದು ಹೇಳಿದೆವು. ಮನೆಯವರ ಮರ್ಯಾದೆ ಹೋಗುತ್ತದೆ ಎಂದು ಕೂಡ ಹೇಳಿದೆವು. ಬಳಿಕ ನಾನು ನನ್ನ ತಂಗಿಯನ್ನು ಆನೇಕಲ್ ಗೆ ಕರೆದುಕೊಂಡು ಹೋದೆ.

ನಮ್ಮ ಮನೆಗೆ ಬಂದ ಬಳಿಕ ನನ್ನ ತಂಗಿ ಶೈಲಜಾ ಎರಡು ಮೂರು ದಿವಸ ಮೌನವಗಿದ್ದಳು, ಹೆಚ್ಚು ಮಾತನಾಡುತ್ತಿರಲಿಲ್ಲ. ನಾನು ಆಕೆಯನ್ನು ವಿಚಾರಿಸಿದಾಗ ನಾನೇನೋ ತಪ್ಪು ಮಾಡಿದ್ದೇನೆ ಎಂದು ಹೇಳಿದಳು. ದಿನಾಂಕ:13-02-2022 ರಂದು ನಾನು ಶೈಲಾಜಾಳಲ್ಲಿ ಏನೋ ಹೇಳಬೇಕು ಎಂದು ಹೇಳುತ್ತಿದ್ದೆಯಲ್ಲ ಹೇಳು ಎಂದೆ, ಆಗ ಅವಳು ನಾನು ಮತ್ತು ಪುನೀತ್ ಪರಸ್ಪರ ಪ್ರೀತಿಸುತ್ತಿದ್ದೇವೆ ಇದಕ್ಕೆ ತಾಯಿ ಅಡ್ಡಿ ಬರುತ್ತಿದ್ದರು ಪೋನಿನಲ್ಲಿ ಮಾತನಾಡಲು ಬಿಡುತ್ತಿರಲಿಲ್ಲ ಮತ್ತು ಮೆಸೇಜ್ ಮಾಡಲು ಕೂಡ ಅಡ್ಡಿ ಬರುತ್ತಿದ್ದರು ಎಂದು ಹೇಳಿದಳು. ಅದಕ್ಕಾಗಿ ತಾಯಿಯನ್ನು ಕೊಲೆ ಮಾಡಲು ಪುನೀತ್ ಜೊತೆ ಪೋನ್ ನಲ್ಲಿ ಮೆಸೆಜ್ ಮಾಡಿ ತೀರ್ಮಾನಿಸಿಕೊಂಡೆವು

ಎಂದು ಹೇಳಿದಳು.

ದಿನಾಂಕಃ30-01-2022 ರಂದು ರಾತ್ರಿ 09ಃ30 ಗಂಟೆ ಸಮಯದಲ್ಲಿ ಪುನೀತ್ ನಮ್ಮ ಮನೆಗೆ ಬಂದನಂತೆ, ನನ್ನ ತಾಯಿ ಮತ್ತು ನನ್ನ ತಂಗಿ ಶೈಲಜಾ ಹಾಗೂ ಪುನೀತ್ ಮಲಗಿಕೊಂಡಿದ್ದರಂತೆ ಆಗ ಶೈಲಜಾ ಮತ್ತು ಪುನೀತ್ ತಾಯಿಯ ಮೂಗು ಮತ್ತು ಬಾಯಿಯನ್ನು ಕೈಯಿಂದ ಒತ್ತಿ ಹಿಡಿದು ಉಸಿರು ಗಟ್ಟಿಸಿ ಸಾಯಿಸಲು ನನ್ನ ತಾಯಿಯ ಮೂಗು ಮತ್ತು ಬಾಯಿಗೆ ಕೈ ಒತ್ತಿ ಹಿಡಿದಾಗ ನನ್ನ ತಾಯಿ ಕೈ ಮತ್ತು ಕಾಲನ್ನು ಒದರಿದಾಗ ಶೈಲಜಾ ನನ್ನ ತಾಯಿಯ ಹೊಟ್ಟೆಯ ಮೇಲೆ ಕೂತು ನನ್ನ ತಾಯಿಯ ಎರಡೂ ಕೈಗಳನ್ನು ಗಟ್ಟಿಯಾಗಿ ಹಿಡಿದಳು. ನನ್ನ ತಾಯಿ ಉಸಿರು ಗಟ್ಟಿ ಸತ್ತಳು ಎಂದು ದೃಢಪಟ್ಟ ನಂತರ ಅವರು ತಾಯಿಯ ಹೆಣವನ್ನು ತೆಗೆದುಕೊಂಡು ಹೋಗಿ ಸಂಪಿನೊಳಗೆ ಹಾಕಿದೆವು ಎಂದು ಶೈಲಜಾ ನನ್ನಲ್ಲಿ ಹೇಳಿದಳು. ಅನುಮಾನ ಬರಬಾರದೆಂದು ಬಿಂದಿಗೆಯ ಕುತ್ತಿಗೆಗೆ ಹಗ್ಗ ಕಟ್ಟಿ ಸಂಪಿನ ಪಕ್ಕ ಇಟ್ಟಿದ್ದರು ಎಂದು ಹೇಳಿದರು.

ಆ ಸಮಯದಲ್ಲಿ ನಾನು ನಮ್ಮ ಹಿರಿಯರ ಬಳಿ ಮಾತನಾಡಿ ಪೊಲೀಸ ದೂರು ನೀಡಬೇಕು ಎಂದು ಮಾತನಾಡುತ್ತಿದ್ದೆವು. ನಾವು ಮಾತನಾಡಿ ಕೊರಟಗೆರೆ ಠಾಣೆಗೆ ಬಂದು ದೂರು ನೀಡುವ ಸಮಯದಲ್ಲಿ ಆನೇ ಕಲ್ ನಿಂದ ಹೊರಟು ಶೈಲಜಾ ತುಮಕೂರಿನ ದೊಡ್ಡಪ್ಪನ ಮನೆಗೆ ಹೋದಳು ಎಂದು ಗೊತ್ತಾಯಿತು. ನಾನು ದೊಡ್ಡಪ್ಪನಿಗೆ ಅವರ ಮನೆಗೆ ಬರುತ್ತೇವೆ ಎಂದು ಹೇಳಿದಾಗ ಅವರ ಶೈಲಜಾ ಬಂದಿರುವ ವಿಚಾರ ಹೇಳಿದಳು. ಕೊರಟಗೆರೆ ಠಾಣೆಯಲ್ಲಿ ದೂರನ್ನು ಸಂಜೆ ಹೊತ್ತಿಗೆ ನೀಡಿದ್ದೇವೆ. ಆ ದೂರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ದಿನಾಂಕಃ14-02-2022 ರ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಅದರಲ್ಲಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದೂರು ಸ್ವೀಕರಿಸಿದ ಬಳಿಕ ಪೊಲೀಸರು ತುಮಕೂರಿನ ದೊಡ್ಡಪ್ಪನ ಮನೆಗೆ ಬಂದು ಶೈಲಜಾಳನ್ನು ವಶಕ್ಕೆ ತೆಗೆದುಕೊಂಡು ಹೋದರು.

ಪುನೀತ್ ನನ್ನು ದಾಬಾಸ್ ಪೇಟೆಯ ಅವನು ಕೆಲಸ ಮಾಡುತ್ತಿದ್ದ ಹಗ್ಗಿಸ್ ಕಂಪನಿಯಿಂದ ವಶಕ್ಕೆ ಪಡೆದು ಕರೆದುಕೊಂಡು ಹೋದರಂತೆ.

ದಿನಾಂಕ:16-02-2022 ರಂದು ಪೊಲೀಸರು ಶೈಲಜಾ ಮತ್ತು ಪುನೀತ್ ನನ್ನು ನನ್ನ ತಾಯಿಯನ್ನು ಮಣ್ಣು ಮಾಡಿದ ಜಾಗಕ್ಕೆ ಕರೆದುಕೊಂಡು ಬರುತ್ತೇವೆ ಎಂದು ಹೇಳಿದರು ನಾನು ಕೂಡ ಅಲ್ಲಿಗೆ ಹೋದೆ. ಅಲ್ಲಿ ಪೊಲೀಸರು ಒಂದು ಪಂಚನಾಮೆಯನ್ನು ಮಾಡಿದರು ಅದಕ್ಕೆ ನನ್ನ ಸಹಿಯನ್ನು ತೆಗೆದುಕೊಂಡರು. ಆ ಪಂಚನಾಮೆಯನ್ನು ಮಧ್ಯಾಹ್ನ 02:30 ಯಿಂದ 03:30 ವರೆಗೆ ಮಾಡಿದರು. ಆ ಪಂಚನಾಮೆಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ದಿನಾಂಕ:16-02-2022 ರ ಶವವನ್ನು ಹೂತಿರುವ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಅದರಲ್ಲಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಪೊಲೀಸರು ಫೋಟೋ ಕೂಡ ತೆಗೆದಿದ್ದಾರೆ. ಆ ಫೋಟೋ ನೋಡಿದರೆ ಗುರುತಿಸಬಲ್ಲೆ. ಆ ಫೋಟೋದಲ್ಲಿ ನಾನು, ಶೈಲಜಾ, ಪುನೀತ್ ಮತ್ತು ಪೊಲೀಸರು ಮತ್ತು ಇತರರು ಇದ್ದಾರೆ. ಸಾಕ್ಷಿ ಗುರುತಿಸಿದ ಫೋಟೋವನ್ನು ನಿಪಿ-3 ಎಂದು ಗುರುತಿಸಲಾಯಿತು.

ಪೊಲೀಸರು ಪ್ರಕರಣ ದಾಖಲಿಸಿದ ಬಳಿಕ ಶೈಲಜಾ ಮತ್ತು ಪುನೀತ್ ನ ಮೊಬೈಲ್ ಅನ್ನು ಅಮಾನತು ಪಡಿಸಿ Retrieve ಮಾಡಿದಾಗ ಪರಸ್ಪರ ಮೇಸೇಜ್ ಮಾಡಿದ ವಿಚಾರ ಗೊತ್ತಾಯಿತು. ಶೈಲಜಾ ಪುನೀತ್ ಹೆಸರನ್ನು ತನ್ನ ಮೊಬೈಲ್ ನಲ್ಲಿ ಕೋತಿ ಎಂದು SAVE ಮಾಡಿದ್ದಳು. ಶೈಲಜಾ ಪುನೀತ್ ಗೆ ಮೇಸೇಜ್ ಮಾಡಿ ಇವತ್ತು ರಾತ್ರಿ ಬಾ ತಾಯಿಯನ್ನು ಕೊಲೆ ಮಾಡೋಣಾ ಎಂದು ಮಾಹಿತಿ ನೀಡಿದ್ದಳು. ಅವನು ನಿನ್ನನ್ನು ನಂಬುವುದು ಹೇಗೆ ಎಂದು ಕೇಳಿದಾಗ ನಾನು ಕೈ ಜೋಡಿಸುತ್ತೇನೆ ಇಬ್ಬರು ಸೇರಿ ಕೊಲೆ ಮಾಡೋಣಾ ಎಂದು ಮೇಸೇಜ್ ಮಾಡಿದ್ದಳು ಎಂದು ಗೊತ್ತಾಯಿತು. ಸಮಾದಿ ಸ್ಥಳದಲ್ಲಿ ಮಹಜರ್ ಮಾಡುವ ಕಾಲಕ್ಕೆ ಪೊಲೀಸರು ಪುನೀತ್ ನ ಮೂಗಿನ ಮೇಲೆ ನನ್ನ ತಾಯಿ ಪರಚಿದ ಗಾಯ ಇದೆ ಎಂದು ಹೇಳಿದಳು.

ಶೈಲಜಾಳ ಕೈಯಲ್ಲಿ ತಾಯಿ ಪರಚಿದ ಗಾಯ ಇದೆ ಎಂದು ಹೇಳಿದರು.

ಶೈಲಜಾ ಮತ್ತು ಪುನೀತ್ ನನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ವಿ.ಸಿ ಮೂಲಕ 1 ಮತ್ತು 2 ನೇ ಆರೋಪಿಗಳಾದ ಪುನೀತ್ ಮತ್ತು ಶೈಲಜಾ ರನ್ನು ನೋಡಿ ಗುರುತಿಸಿರುತ್ತಾರೆ. ನನ್ನ ಪ್ರಕಾರ ನನ್ನ ತಾಯಿಯ ಸಾವಿಗೆ ಇಬ್ಬರು ಆರೋಪಿಗಳು ಕಾರಣ. ಅವರು ನನ್ನ ತಾಯಿಯನ್ನು ಉಸಿರುಗಟ್ಟಿಸಿ ಸಾಯಿಸಿದ್ದಾರೆ. ಬಳಿಕ ಹೆಣವನ್ನು ಸಂಪಿಗೆ ಹಾಕಿದ್ದಾರೆ.

ಈ ನ್ಯಾಯಾಲಯದಲ್ಲಿ ನನ್ನ ರಕ್ತವನ್ನು ವೈಜ್ಞಾನಿಕ ಪರೀಕ್ಷೆಗೊಸ್ಕರ ವೈದ್ಯರು ಸಂಗ್ರಹಿಸಿದ್ದು ಆ ಕಾಲಕ್ಕೆ ಪೊಲೀಸರು ಮಾಡಿದ ರಕ್ತದ ಮಾದರಿ ಸಂಗ್ರಹಿಸಿದ ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ, ಅದನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ದಿನಾಂಕ:04-08-2022 ರ ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲು ಶ್ರೀ.MM ವಕೀಲರಿಂದ ಆರೋಪಿಗಳ ಪರವಾಗಿ:-**

ದೂರನ್ನು ಠಾಣೆಯಲ್ಲಿ ನಾನು ಹೇಳಿದ್ದೇನೆ ಪೊಲೀಸರು ಟೈಪ್ ಮಾಡಿದ್ದಾರೆ. ನಾನು ಬಿ.ಕಾಂ ಓದಿದ್ದೇನೆ. ನನ್ನ ತಂದೆ ಚಿನ್ನ ಬೆಳ್ಳಿ ಕೆಲಸ ಮಾಡುತ್ತಿದ್ದರು. ನನ್ನ ತಂದೆ ನನಗೆ ಮತ್ತು ನನ್ನ ತಂಗಿಗೆ ಮದುವೆಗೆ ಬೇಕಾಗುವಷ್ಟು ವಡವೆ ಮಾಡಿ ಇಟ್ಟಿದ್ದರು ಎಂದರೆ ಸರಿಯಲ್ಲ. ಶೈಲಜಾ ಬೇರೆ ಜನರೊಂದಿಗೆ ಮಾತನಾಡಿದರೆ ಪುನೀತ್ ಗಲಾಟೆ ಮಾಡುತ್ತಿದ್ದ. ನನ್ನ ತಾಯಿ ತೀರಿಕೊಳ್ಳುವ ಎರಡು ಮೂರು ತಿಂಗಳ ಮುಂಚಿನಿಂದ ಆ ರೀತಿ ಗಲಾಟೆ ಮಾಡುತ್ತಿದ್ದ. ಆ ಸಮಯದಲ್ಲಿ ನಾನು ಅಥವಾ ತಾಯಿ ಪೊಲೀಸ್ ದೂರು ನೀಡಲಿಲ್ಲ. ಹುಟ್ಟು ಹಬ್ಬಕ್ಕೆ ಬಂದಾಗ ನಾನು ಪುನೀತ್ ಬಳಿ ಅವನು ಗಲಾಟೆ ಮಾಡುತ್ತಿದ್ದ ವಿಚಾರ ಚರ್ಚೆ ಮಾಡಿಲ್ಲ. ನನ್ನ ತಾಯಿ ನನಗೆ ವಿಚಾರ ತಿಳಿಸಿದ ಬಳಿಕ ನಾನು ಪುನೀತ್ ಬಳಿ ಆ ವಿಚಾರ ಮಾತನಾಡಿಲ್ಲ. ನನ್ನ ತಾಯಿ ತೀರಿಕೊಂಡ ದಿವಸ ನಾನು ಪೊಲೀಸರಿಗೆ ದೂರು ನೀಡಿಲ್ಲ. ಆಸಹಜ ಸಾವು ಆದಾಗ ಆ ವಿಚಾರವನ್ನು

ಪೊಲೀಸರಿಗೆ ತಿಳಿಸಬೇಕು ಎಂದರೆ ಇರಬಹುದು.ಆದರೆ ನಾನು ಆ ದಿನ ಪೊಲೀಸರಿಗೆ ನನ್ನ ತಾಯಿಯ ಸಾವಿನ ಬಗ್ಗೆ ದೂರು ನೀಡಿಲ್ಲ. ಸಜ್ಜನರ ಬೀದಿಯಲ್ಲಿ ನನ್ನ ತಾಯಿಯ ಮನೆ ಬಸ್ ಸ್ಟಾಂಡ್ ಗೆ ತುಂಬಾ ಹತ್ತಿರದಲ್ಲಿ ಇದೆ ಎಂದರೆ ಸರಿ. ನಮ್ಮ ತವರು ಮನೆ ಇರುವ ನಿವೇಶನ 20 Feet x 37 Feet ಇರಬಹುದು. ಅದರಲ್ಲಿ ಇರುವ ಮನೆ ಆರ್ ಸಿ ಸಿ ಮನೆ ಎಂದರೆ ಸರಿ. ಆ ಮನೆ ಮತ್ತು ನಿವೇಶನದ ಈಗಿನ ಮಾರುಕಟ್ಟೆ ಮೌಲ್ಯ 75 ರಿಂದ 80 ಲಕ್ಷ ಇದೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಕೊರಟಗೆರೆ ತಹಶಿಲ್ದಾರ್ ಕಛೇರಿಯ ಹಿಂಭಾಗ ಒಂದು ನಿವೇಶನ ಇದೆ ಎಂದರೆ ಸರಿ. ಅದು ಸುಮಾರು 20 ಲಕ್ಷ ಬೆಲೆ ಮಾಳುತ್ತೆ ಎಂದರೆ ಸರಿಯಲ್ಲ. ನನ್ನ ತಂದೆ ನನ್ನ ಮತ್ತುನನ್ನ ತಂಗಿಯ ಮದುವೆಗೆ ಸುಮಾರು 40 ಲಕ್ಷ ರೂಪಯಿಯಷ್ಟು ವಡವೆ ಮಾಡಿಸಿ ಇಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಸತ್ತ ಬಳಿಕ ನನ್ನ ತಂಗಿಯನ್ನು ನಾನು ನನ್ನ ಗಂಡನ ಮನೆಗೆ ಅಥವಾ ನನ್ನ ದೊಡ್ಡಪ್ಪನ ಮನೆಗೆ ಕರೆದುಕೊಂಡು ಹೋಗುವುದಕ್ಕೆ ಪುನೀತ್ ಅಡ್ಡಿ ಪಡಿಸಿಲ್ಲ ಎಂದರೆ ಸರಿಯಲ್ಲ. ನಾವು ಆ ವಿಚಾರದಲ್ಲಿ ಯಾವುದೇ ಚರ್ಚೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯನ್ನು ನನ್ನ ತಂಗಿ ಮತ್ತು ಪುನೀತ್ ಉಸಿರುಗಟ್ಟಿಸಿ ಸಾಯಿಸಿದರು ಎಂದು ನನ್ನ ತಂಗಿ ನನ್ನಲ್ಲಿ ಹೇಳಲೇ ಇಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಸತ್ತ ಬಳಿಕ ಪುನೀತ್ ಮತ್ತು ಶೈಲಜಾ ಮದುವೆ ಮಾಡಿಕೊಂಡಿಲ್ಲ. ನನ್ನ ತಂದೆ ಮಾಡಿದ ವಡವೆ ಮತ್ತು ಆಸ್ತಿಗಳನ್ನು ನಾನು ಒಬ್ಬಳೆ ಕಬಳಿಸಲು ಶೈಲಜಾ ಮೇಲೆ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಶೈಲಜಾ ಬಿ.ಕಾಂ ಪದವೀದರಳು ಎಂದರೆ ಸರಿ. ಪುನೀತ್ ಐ.ಟಿ.ಐ ಓದಿದ್ದ ಆದರೆ ಪೂರ್ತಿ ಮಾಡಿಲ್ಲ. ಪುನೀತ್ ಮತ್ತು ಶೈಲಜಾ ಇಬ್ಬರು ತಾವು ಅಣ್ಣ ತಂಗಿ ಎಂಬ ಅರಿವು ಇತ್ತು ಮತ್ತು ಅವರು ಪರಸ್ಪರ ಪ್ರೀತಿಸುತ್ತಿರಲಿಲ್ಲ ಎಂದರೆ ಸರಿಯಲ್ಲ.

ಶೈಲಜಾಳನ್ನು ನನ್ನ ಗಂಡನ ಮನೆಗೆ ಕರೆದುಕೊಂಡು ಹೋದ ಬಳಿಕ ನಾನು ಆಕೆಯನ್ನು, ನನ್ನ ಗಂಡನನ್ನು ಮದುವೆ ಮಾಡಿಕೊಳ್ಳುವಂತೆ ಹೇಳಿದ ಎಂದರೆ ಸರಿಯಲ್ಲ. ಇಡೀ ಆಸ್ತಿ ನನಗೆ ಸೇರಬೇಕು ಎಂಬ ಕಾರಣದಿಂದ ಆಕೆಗೆ ಆ ರೀತಿ

ಹೇಳಿದ್ದೆ ಎಂದರೆ ಸರಿಯಲ್ಲ. ಆಕೆ ಅದಕ್ಕೆ ಒಪ್ಪಲಿಲ್ಲ ಎಂದರೆ ನಾನು ಆಕೆಯನ್ನು ಕೇಳಲೇ ಇಲ್ಲ ಎಂದು ನುಡಿಯುತ್ತಾರೆ. ಆ ರೀತಿ ಆಕೆ ಒಪ್ಪದೆ ಇದ್ದ ಕಾರಣ ನಾನು ನನ್ನ ಗಂಡ ಅತ್ತೆ ಮಾವ ಆಕೆಯ ಮೇಲೆ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ನನ್ನ ತಾಯಿ ತೀರಿಕೊಂಡ ಬಳಿಕ ನಾನು ನನ್ನ ಚಿಕ್ಕಮ್ಮ ಛಾಯ ಅವರನ್ನು ಮಾತನಾಡಿಸಿಲ್ಲ. ನಾನು ಅವರನ್ನು ಅವರ ಬಳಿ ಹೋಗಿ ನೋಡಿಲ್ಲ. ಪುನೀತ್ ಮತ್ತು ಶೈಲಜಾ ನಿರಪರಾಧಿಗಳು, ನಾನು ಅವರ ಮೇಲೆ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಯನ್ನು ಅವರು ಉಸಿರುಗಟ್ಟಿಸಿ ಸಾಯಿಸಿ ಸಂಪಿಗೆ ಹಾಕಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯೇ ಸಂಪಿಗೆ ಬಿದ್ದು ಸತ್ತಿದ್ದಾರೆ ಎಂದರೆ ಸರಿಯಲ್ಲ.

ಪುನೀತ್ ನ ಮೂಗಿನ ಮೇಲೆ ತರಚಿದ ಗಾಯ ಆಗಿಲ್ಲ ಮತ್ತು ಪೊಲೀಸರು ನನಗೆ ಆ ರೀತಿ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ಹೊಟ್ಟೆಯ ಮೇಲೆ ಕೂತು ಶೈಲಜಾ ಅವರ ಕೈಯನ್ನು ಹಿಡಿದುಕೊಂಡಿಲ್ಲ ಎಂದರೆ ಸರಿಯಲ್ಲ. ಶೈಲಜಾ ಮತ್ತು ಪುನೀತ್ ಪರಸ್ಪರ ತಾಯಿಯನ್ನು ಸಾಯಿಸುವ ಸಲುವಾಗಿ ಮೇಸೇಜ್ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಈ ಆರೋಪಗಳೆಲ್ಲಾ ನಾನೇ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**